Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President

Volume 39 | Issue - 30 | 16th January 2025

## Joint meeting with Innerwheel

ಮುಖ್ಯ ಅತಿಥಿ:

ಡಾ। ಸೋನಿ ಡಿ'ಕೊಸ್ಟಾ

ವಿಷಯ :

“ಉತ್ತಮ ಆರೋಗ್ಯಕ್ಕೆ ನಮ್ಮ ಜೀವನ ಶೈಲಿ”

Time : 7.00 p.m.
Venue : Blue Waters, Ferry Road, Kundapura

**39th year of Service and Fellowship**



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

# ವಾರದ ವರದಿ





















ಕಳೆದ ವಾರದ ಸಭೆಯು ಶಿವಪ್ರಸಾದ್ ಗ್ರಾಂಡ್ ನಲ್ಲಿ ರೊ. ಶ್ರೀನಿವಾಸ ಶೇಟ್ ರವರ ಪ್ರಾರ್ಥನೆಯೊಂದಿಗೆ ಆರಂಭಗೊಂಡಿತು. ರಾಷ್ಟ್ರೀಯ ಪ್ರಶಸ್ತಿ ವಿಜೇತ ಸಿನೆಮಾ ನಿರ್ದೇಶಕ ಯಾಕೂಬ್ ಖಾದರ್ ಗುಲ್ವಾಡಿ ಅವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ರೊ.ಸುರೇಖಾ ಪುರಾಣಿಕರು ಕಳೆದ ವಾರದ ವರದಿಯನ್ನು ಸಭೆಗೆ ಮಂಡಿಸಿದರು. ರೊ. ಸತ್ಯನಾರಾಯಣ ಪುರಾಣಿಕರು ವಾರದ ಚಿಂತನೆಯಲ್ಲಿ ಜೀವನದಲ್ಲಿ ಯಾರಿಗೆ ಸಹಾಯ ಮಾಡಬೇಕು, ಸಹಾಯ ಮಾಡಿದವರು ಹೇಗೆ ಪ್ರತಿಫಲಾಪೇಕ್ಷೆಯನ್ನು ಇಟ್ಟುಕೊಳ್ಳಬಾರದೋ ಹಾಗೆಯೇ ಸಹಾಯ ಪಡೆದವನಿಗೆ ಕೃತಜ್ಞತಾ ಭಾವವಿರಬೇಕು ಎಂದು ತಿಳಿಸಿದರು. ರೊ. ಕೆ. ಕೆ. ಕಾಂಚನರು ರೋಟರಿ ಮಾಹಿತಿ ನೀಡುತ್ತಾ, ಯಾವ ಕೆಲಸದಲ್ಲೂ ಮೇಲು–ಕೀಳುಗಳಿಲ್ಲ. ಎಲ್ಲಾ ಕ್ಷೇತ್ರದ ಸಾಧಕರನ್ನು ಗುರುತಿಸುವುದು ಕರ್ತವ್ಯವಾಗಿದ್ದು ಇಂದು ಚಲನಚಿತ್ರ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ನಮ್ಮ ಇಂದಿನ ಅತಿಥಿಯಾಗಿರುವ ಯಾಕೂಬ್ ಖಾದರ್ ಗುಲ್ವಾಡಿಯವರನ್ನು ಗುರುತಿಸಿ ಗೌರವಿಸುವ ಅವಕಾಶ ದೊರೆತಿದೆ ಎಂದರು.

ರೊ. ರಮಾನಂದ ಕಾರಂತರು ಮುಖ್ಯ ಅತಿಥಿ ಹಾಗೂ ವಾರದ ಸಭೆಯಲ್ಲಿ ಅವರ ಸಿನಿ ಪಯಣದ ಯಶೋಗಾಥೆಯನ್ನು ತಿಳಿಸಲು ಬಂದಿದ್ದ ಯಾಕೂಬ್ ಖಾದರ್ ಗುಲ್ವಾಡಿ ಅವರ ಪರಿಚಯವನ್ನು ಸಭೆಗೆ ನೀಡಿದರು. ನಂತರ ಅತಿಥಿಗಳು ಅವರ ಸಿನಿ ಪಯಣವನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು. ಯಾವುದೇ ಮುಜುಗರ ಹಾಗೂ ಕೀಳರಿಮೆ ಇಲ್ಲದೆ ಅವರು ಬೆಳೆದು ಬಂದ ದಾರಿಯನ್ನು ಕ್ಲಬ್ ಸದಸ್ಯರೊಂದಿಗೆ ಹಂಚಿಕೊಂಡರು.

ಕೃಷಿ, ಹುರಿ ಹಗ್ಗ ತಯಾರಿಸುವ ಹಾಗೂ ಗುಜರಿ ವ್ಯಾಪಾರ ಮಾಡುವ ಬಡ ಕುಟುಂಬದಲ್ಲಿ ಜನಿಸಿದ ಇವರು ಆರನೇ ತರಗತಿಗೆ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ತಂದೆಯ ಗುಜರಿ ಅಂಗಡಿಗೆ ಬರುತ್ತಿದ್ದ ಪುಸ್ತಕಗಳನ್ನು ಓದುತ್ತಾ ಓದುವ ಹವ್ಯಾಸವನ್ನು ಬೆಳೆಸಿಕೊಂಡರು. ತರಂಗ ಸಾಪ್ತಾಹಿಕ ಪತ್ರಿಕೆಯಲ್ಲಿ ಬರುತ್ತಿದ್ದ ಸಂತೋಷ್ ಕುಮಾರ್ ಗುಲ್ವಾಡಿಯವರ ಲೇಖನಗಳನ್ನು ಹಸ್ತಾಕ್ಷರಗಳನ್ನು ನೋಡುತ್ತಾ ಅದರಿಂದ ಸ್ಫೂರ್ತಿಗೊಂಡು ತಾನೂ ಸಾಹಿತ್ಯ ಕ್ಷೇತ್ರದಲ್ಲಿ ಏನಾದರೂ ಸಾಧನೆ ಮಾಡಬೇಕೆಂದು ನಿರ್ಧರಿಸಿದರು. ಬರೆಯುವ ಹವ್ಯಾಸ ಬೆಳೆಸಿಕೊಂಡು ಅವರ ಮೊದಲ ಲೇಖನ ಯು.ಎಸ್. ಶೆಣೈ ಅವರ ಕುಂದಪ್ರಭ ಪತ್ರಿಕೆಯಲ್ಲಿ ಮೊದಲ ಬಾರಿಗೆ ಪ್ರಕಟಗೊಂಡಿತು. ಅವರ ಶಾಲಾ ಶಿಕ್ಷಕರ ಸಹಾಯದಿಂದ ಮಣಿಪಾಲದಲ್ಲಿ ಸಂತೋಷ್ ಕುಮಾರ್ ಗುಲ್ವಾಡಿ ಅವರನ್ನು ಭೇಟಿಯಾದರು. ಅವರು ಯಾಕೂಬರಿಗೆ ಬರೆದ ಪತ್ರಗಳನ್ನು ಇನ್ನೂ ಜೋಪಾನವಾಗಿರಿಸಿದ್ದಾರೆ.

2006 ರಲ್ಲಿ ವೈದೇಹಿಯವರ ಗುಲಾಬಿ ಟಾಕೀಸ್ ಚಿತ್ರದಲ್ಲಿ ಕುಂದಗನ್ನಡ ಹಾಗೂ ಬ್ಯಾರಿ ಭಾಷೆ ಇರುವುದರಿಂದ ಅದರಲ್ಲಿ ತಿದ್ದುಪಡಿ ಮಾಡಿಕೊಡಲು ಖಾದರರಿಗೆ ಗಿರೀಶ್ ಕಾಸರವಳ್ಳಿ ಅವರಿಂದ ಕರೆಬಂತು. ನಂತರ ಅದೇ ಚಿತ್ರದ ಚಿತ್ರೀಕರಣದ ಸ್ಥಳಕ್ಕೆ ಬರಲು ಕರೆ ಬಂದಾಗ M80 ಯಲ್ಲಿ ತಿರುಗಾಡುತ್ತಾ ಇದ್ದ ಖಾದರರಿಗೆ ಕಾರಲ್ಲಿ ಓಡಾಡುವ ಅವಕಾಶ ದೊರೆಯಿತು. ಮುಂದೆ ಈ ಚಿತ್ರಕ್ಕೆ ಸ್ವರ್ಣ ಕಮಲ ಪ್ರಶಸ್ತಿ ಬಂತು. ನಂತರ ಅವರು ಕೆಲಸ ಮಾಡಿದ 'ಹಜ್' ಚಿತ್ರ, 'ಗೆರೆಗಳು' ಇತ್ಯಾದಿ ಚಿತ್ರಗಳಿಗೆ ಪ್ರಶಸ್ತಿ ದೊರೆತಾಗ ತಾನೂ ಚಿತ್ರ ನಿರ್ದೇಶನ ಮಾಡಬೇಕೆಂದು ಬಯಸಿ ಪತ್ನಿಯ ಚಿನ್ನವನ್ನು ಅಡವಿಟ್ಟು ಚಲನಚಿತ್ರ ನಿರ್ದೇಶಿಸಿದರು.'ರಿಸರ್ವೇಶನ್' ಚಿತ್ರಕ್ಕೂ ರಾಷ್ಟ್ರೀಯ ಪ್ರಶಸ್ತಿ ದೊರೆಯಿತು.

ಅವರಿಗೆ ರಾಷ್ಟ್ರಪತಿಗಳಿಂದ ಪ್ರಶಸ್ತಿ ಸ್ವೀಕರಿಸಿದ್ದು, ಅಮೆರಿಕದಲ್ಲಿ 'ಅಕ್ಕ' ಸಮ್ಮೇಳನದಲ್ಲಿ ಭಾಗಿಯಾಗುವ ಅವಕಾಶ ದೊರೆತಿದ್ದು ಜೀವನದ ಅವಿಸ್ಮರಣೆಯ ಘಳಿಗೆಗಳು ಎಂದರು. ವಿದ್ಯಾಭ್ಯಾಸ ಹಾಗೂ ಬಹುಭಾಷಾ ಜ್ಞಾನ ವ್ಯವಹಾರ ಜೀವನದಲ್ಲಿ ಅತಿ ಮುಖ್ಯ ಎಂದು ಅಭಿಪ್ರಾಯಪಟ್ಟರು. ಇಂದಿನ ದಿನಗಳಲ್ಲಿ ಪ್ರತಿಭಾವಂತರು ಅವಕಾಶ ವಂಚಿತರಾಗಿದ್ದಾರೆ. ಸಾಧಕರನ್ನು, ಪ್ರತಿಭಾವಂತರನ್ನು ಗುರುತಿಸುವ ಕೆಲಸ ಮಾಡುತ್ತಿರುವ ರೋಟರಿಯಂತಹ ಸಂಸ್ಥೆಗೆ ಧನ್ಯವಾದವನ್ನಿತ್ತರು. ಕುಂದಾಪುರದ ಸಂಸ್ಕೃತಿ, ಭಾಷೆಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆಸುವುದು ಅತ್ಯಗತ್ಯ ಎಂದು ಅಭಿಪ್ರಾಯಪಟ್ಟರು.

ನಂತರ ಅತಿಥಿ ಉಪನ್ಯಾಸವನ್ನಿತ್ತ ಯಾಕೂಬ್ ಖಾದರ್ ಗುಲ್ವಾಡಿ ಅವರನ್ನು ಅಧ್ಯಕ್ಷರು ಸನ್ಮಾನಿಸಿದರು. ಅಧ್ಯಕ್ಷರು ಅವರ ಅಧ್ಯಕ್ಷೀಯ ನುಡಿಯಲ್ಲಿ ಜನವರಿ 24–25–26 ರಂದು ಉಡುಪಿಯಲ್ಲಿ ನಡೆಯುವ "ನವೋತ್ಸವ" ಜಿಲ್ಲಾ ರೋಟರಿ ಸಮ್ಮೇಳನಕ್ಕೆ ನಮ್ಮ ಕ್ಲಬ್ಬಿನ 21 ಮಂದಿ ಸದಸ್ಯರು ಈಗಾಗಲೇ ನೋಂದಾಯಿಸಿದ್ದು, ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕ್ಲಬ್ ಸದಸ್ಯರಲ್ಲಿ ಕೋರಿದರು. ಹಾಗೂ ಜನವರಿ 30ರಂದು ಈ ತಿಂಗಳ ಕುಟುಂಬ ಸಮ್ಮಿಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಭೆಗೆ ತಿಳಿಸಿದರು. ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿ ಅವರು ನಗೆಚಟಾಕಿ ಸಿಡಿಸಿದರು. ರೊ. ಡಾ. ರಾಮಮೋಹನರು ಲಕ್ಕಿ ರೋಟೇರಿಯನ್ನರಾಗಿ ಮೂಡಿಬಂದರು. ರೊ. ದೊಮಚಂದ್ರಶೇಖರರು ವಂದನಾರ್ಪಣೆಗೈದರು. ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಮುಂದಿನ ವಾರಕ್ಕೆ ಕಾಯ್ದಿರಿಸಲಾಯಿತು.




ತಾ. 08–01–2025ನೇ ಬುಧವಾರದಂದು ಸರಕಾರದ "ಪುಸ್ತಕ ಜೋಳಿಗೆ" ಕಾರ್ಯಕ್ರಮದಡಿಯಲ್ಲಿ ತಲ್ಲೂರು ಸಾರ್ವಜನಿಕ ಗ್ರಂಥಾಲಯಕ್ಕೆ ಉಪಯುಕ್ತ 20 ಪುಸ್ತಕಗಳನ್ನು ನಮ್ಮ ಕ್ಲಬ್‌ನ ವತಿಯಿಂದ ವಿತರಿಸಲಾಯಿತು. ತಲ್ಲೂರು ಪಂಚಾಯತ್ ಅಧ್ಯಕ್ಷರು, ರೋಟರಿ ಅಧ್ಯಕ್ಷರು ಮತ್ತು ರೋಟರಿ ಸದಸ್ಯರಾದ ರೊ. ಔಜಲಿನ್ ರೆಬೆಲ್ಲೋ, ರೊ. ಅರುಣ್ ಮೆಂಡೋನ್ಸ ರೊ. ರೇಗನ್ ಲೋಬೊ ಉಪಸ್ಥಿತರಿದ್ದರು.

## ಅಭಿನಂದನೆಗಳು



**ರೊ. ಜುಡಿತ್ ಮೆಂಡೋನ್ಸಾ**

ಮಂಗಳೂರು ವಿಶ್ವವಿದ್ಯಾನಿಲಯದ ಕುಂದಗನ್ನಡ ಅಧ್ಯಯನ ಪೀಠದ ಸದಸ್ಯರಾಗಿ ನಮ್ಮ ಸಂಸ್ಥೆಯ ಅಧ್ಯಕ್ಷರು ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾದ ರೊ. ಜ್ಯುಡಿತ್ ಮೆಂಡೋನ್ಸಾರವರು ನೇಮಕಗೊಂಡಿದ್ದಾರೆ. ಇವರಿಗೆ ಕ್ಲಬ್‌ನ ಪರವಾಗಿ ಅಭಿನಂದನೆಗಳು.





ತಾ 9–1–25ರಂದು "ನಮ್ಮ ಕ್ಲಿನಿಕ್" ಕುಂದಾಪುರ ಇಲ್ಲಿ ನಮ್ಮ ಕ್ಲಬ್ ನ ಸಂಯುಕ್ತ ಆಶ್ರಯದಲ್ಲಿ "ದೃಷ್ಟಿ (ಪ್ರ)ದಾನ ಯೋಜನೆ" 2024–25ರ ಉಚಿತ ನೇತ್ರ ತಪಾಸಣೆ ಹಾಗೂ ಶಸ್ತ್ರಚಿಕಿತ್ಸಾ ಶಿಬಿರ ನಡೆಯಿತು. 82 ಮಹಿಳೆಯರು, 34 ಪುರುಷರು, 14 ಕಣ್ಣಿನ ಪೊರೆ ಸಮಸ್ಯೆಯವರು, 56 ದೃಷ್ಟಿ ಸಂಬಂಧಿ ಸಮಸ್ಯೆ ಇರುವವರು ಸೇರಿ ಒಟ್ಟಾರೆ 116 ಮಂದಿ ಈ ಶಿಬಿರದಲ್ಲಿ ಭಾಗವಹಿಸಿ ಶಿಬಿರದ ಪ್ರಯೋಜನ ಪಡೆದುಕೊಂಡರು.

## ಹುಟ್ಟುಹಬ್ಬದ ಶುಭಾಶಯಗಳು



**ರೊ. ಡಾ. ಉಮೇಶ್ ಪುತ್ರನ್**
**ದಿನಾಂಕ : ಜನವರಿ 21**
**ಮೊಬೈಲ್ : 9448068168**



**ರೊ. ರಾಘವೇಂದ್ರ ಭಟ್**
**ದಿನಾಂಕ : ಜನವರಿ 23**
**ಮೊಬೈಲ್ : 9448151855**

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



**ತಾ. 23–01–2025ನೇ ಗುರುವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ಪಿಡಿಜಿ ರೊ. ಅಭಿನಂದನ್ ಎ. ಶೆಟ್ಟಿ ಮತ್ತು ಆ್ಯನ್ ನೀತಾ ಶೆಟ್ಟಿ ಇವರಿಗೆ ಕ್ಲಬ್ಬಿನ ಸದಸ್ಯರ ಪರವಾಗಿ ಶುಭಾಶಯಗಳು.**
**ಮೊ. : 9844065100**

ದಿನಾಂಕ 21/01/2025ರಂದು ತಮ್ಮ ಜನ್ಮ ದಿನದ ಪ್ರಯುಕ್ತ ರೊ. ಡಾ. ಉಮೇಶ್ ಪುತ್ರನ್‌ರವರು ತಮ್ಮ ಸ್ವಗೃಹದಲ್ಲಿ ಬೆಳಿಗ್ಗೆ 8 ಗಂಟೆಯಿಂದ ರೋಟರಿ ಸದಸ್ಯರಿಗೆ ಉಪಾಹಾರ ಕೂಟ **"BREAKFAST GETTOGETHER "** ನ್ನು ಹಮ್ಮಿ ಕೊಂಡಿದ್ದು, ಎಲ್ಲಾ ಸದಸ್ಯರನ್ನು ಆಮಂತ್ರಿಸಿರುತ್ತಾರೆ. ಸದಸ್ಯರು ತಪ್ಪದೇ ಭಾಗವಹಿಸಬೇಕಾಗಿ ವಿನಂತಿಸುತ್ತೇನೆ.

**– ಅಧ್ಯಕ್ಷರು**

